(610)

ಸತ್ಯವಾದಿ ಸೋಮವಾರ ಸಂಚಿಕೆ
ಶ್ರೀ ದ್ವಾರಕಾ ಜಗದ್ಗುರುಗಳವರ
ಉದಾತ್ತಾಶ್ರಯದಲ್ಲಿ ಪ್ರಕಟವಾಗುವ
ಪ್ರ ಬೋ ಧ
ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿದೆ
ವಾರ್ಷಿಕ ಚಂದಾ
ಅಂಚೆವೆಚ್ಚ ಸಮೇತ 1-14-0

Regd No M 1299 34 th Year ತಾ|| 10--3--51

ಸತ್ಯವಾದಿ
SATYAVADI

ಸಂಪಾದಕರು- ಅರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಗೋ ರ ಕ್ಷ ಣೆ
[ತಿಂಗಳಿಗೊಂದಿಕೆವರ್ತ]
ವಾರ್ಷಿಕಚಂದಾ ಅಂಚೆವೆಚ್ಚಸೇರಿ 8 ಆಣೆ

Protect the Cow
ಗೋರಕ್ಷಣೆ ನಡೆಯಲಿ

ಪುನರ್ಪರಿಶೀಲನೆ

ಬೆಂಗಳೂರು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಧಾನ ನ್ಯಾಯಾಧೀಶರಾದ ರಾವ್ ಬಹದ್ದೂರ್ ಮೇದಪ್ಪನವರ ಮುಂದೆ ಸಿರಿಗಲಭೆ ಮೊಕದ್ದಮೆಗಳ ತೀರ್ಪುಗಳ ಪುನರ್ಪರಿಶೀಲನೆ ಪ್ರಾರಂಭವಾಯಿತು.

ಆಗಮನ

ಶ್ರೀ ಕಡಪಾತ್ರಿ ಸ್ವಾಮಿಗಳವರು ಬೆಂಗಳೂರಿಗೆ ಮೊನ್ನೆ ಬಂದರು.

ತಿರಸ್ಕೃತವಾಯಿತು

ಶ್ರೀಗಳಾದ ಎಲ್. ಎಸ್. ರಾಜು ಅವರ ಪುತ್ರ ಎಲ್. ಆರ್. ಜಯರಾಂ ಇವರ ಜಾತಿಯಾನು ಅರ್ಜಿ ತಿರಸ್ಕೃತ ಆಯಿತೆಂದು ಬೆಂಗಳೂರು ವಾರ್ತೆ

ಸಂಸ್ಕಾರ ವೇಳೆಲಿ ಮೂರ್ಛೆ

ಮೊನ್ನೆ ಟೆಹರ್ಾನಲ್ಲಿ ಪರ್ಷಿಯಾ ಪ್ರಧಾನಿಗಳಾಗಿದ್ದ ರಜ್ಮಾರವರ ಶವ ಸಂಸ್ಕಾರ ಕಾಲದಲ್ಲಿ ಅವರ ಪತ್ನಿ ಮೂರ್ಛೆ ಹೋದರು.

ಕೊರತೆ ಮುಂಗಡಪತ್ರ

ಅಸ್ಸಾಂನ ಮುಂಗಡಪತ್ರದಲ್ಲಿ ಒಂದಿರುವ ಕೊರತೆ ರೂ. 97 84 ಲಕ್ಷ.

ಕಿರಿ ವಯಸ್ಸಿನ ರಾಯಭಾರಿ

ಇರಾಕ್‌ನಲ್ಲಿ ಭಾರತ ರಾಯಭಾರಿಯಾಗಿ ನೇಮಿತರಾಗಿರುವ ಮಹಮದ್ ಯೂನಸರು ಭಾರತ ರಾಯಭಾರಿಗಳಲ್ಲೆಲ್ಲ ಕಿರಿಯರು.

ನಿಯಂತ್ರಣ ರದ್ದು

ಸೆಣಬಿನ ಮೇಲಿನ ನಿಯಂತ್ರಣವನ್ನು ಭಾರತ ಸರ್ಕಾರ ರದ್ದು ಮಾಡಿತು.

ಬೇರ್ವಿರಿಗೆ ಬೇಡವಾಗಿದೆ

ಬ್ರಿಟನ್ನಿನ ವಿದೇಶ ಸಚಿವ ಪದವಿ ಬಿಡುವ ನಿರ್ಧಾರಕ್ಕೆ ಅರ್ನೆಸ್ಟ್ ಬೇವಿನರು ಬಂದಿರುವುದಾಗಿ ಲಂಡನ್ ವಾರ್ತೆ.

ಹೊಳಪಟ್ಟ ತಯಾರಿಕೆ

ಮದೆಂತೆಸು ಪ್ರಾಂತ್ಯದಲ್ಲಿ ಮೊಹರೆ ಚುನಾವಣೆಗಾಗಿ ಮೇಳಾಪಟ್ಟ ಸಿದ್ಧವಾಗುತ್ತಿದೆ.

ಕೈಲ್ಪೆ ರೇಟುಗಳು

1 ನೇ ಕ್ಲಾಸಿಗೆ 46-47 ರಲ್ಲಿ ಮೈಲಿಗೆ 16 9 ಪೈಗಳಿದ್ದವು ಹೊಸ ರೇಟು 27 ಪೈಗಳು ಶೇಕಡ 69 ಹೆಚ್ಚು

2 ನೇ ಕ್ಲಾಸಿಗೆ 46-47 ರಲ್ಲಿ ಮೈಲಿಗೆ 9 93 ಪೈಗಳಿದ್ದವು ಹೊಸರೇಟು 16 ಪೈಗಳು ಶೇಕಡ 50 ಹೆಚ್ಚು

ಇಂಟರ್ ಕ್ಲಾಸಿಗೆ 46-47 ರಲ್ಲಿ 5.31 ಪೈಗಳಿದ್ದವು. ಹೊಸ ರೇಟು 10. 5 ಪೈಗಳು. ಶೇ 98 ಹೆಚ್ಚು

ಮೂರನೆ ಕ್ಲಾಸಿಗೆ 3.61 ಪೈಗಳಿದ್ದವು ಹೊಸರೇಟು 6 ಪೈಗಳು ಶೇ 66 ಹೆಚ್ಚು

ಇದರಿಂದ ಎರಡು ಅಂಶಗಳು ಸ್ಪಿರವಾಗುತ್ತವೆ —

1 ಇಂಟರು ಕ್ಲಾಸಿಗೆ ಎಲ್ಲಕ್ಕಿಂತ ಹೆಚ್ಚು ರೇಟು ವಿಧಿಸಲ್ಪಟ್ಟಿದೆ. ಈ ತರಗತಿಯ ಪ್ರಯಾಣೀಕರು ಮಧ್ಯ ತರಗತಿಯವರು ಆ ತರಗತಿಯ ವಿಷೆಯವೇನೆಂದರೆ 100 ಟಿಕಟ್ಟುಗಳನ್ನು ವಿಕ್ರಯ ಮಾಡಿದಲ್ಲಿ 50 ಮಂದಿಗಾದರೂ ಸ್ಥಳವಿಲ್ಲದಿರುವುದು ಸಾಮಾನ್ಯಾನುಭವದ ಮಾತು.

2 ಮೊದಲನೆ ತರಗತಿಗೆ ರೇಟು ಶೇಕಡಾ 60 ರಷ್ಟು ಹೆಚ್ಚಿಸಿ ಮೂರನೆಯ ತರಗತಿಗೆ ಶೇಕಡ 66 ರಷ್ಟು ಹೆಚ್ಚಿಸಿದೆ. ಇದರಿಂದ ಕಾಂಗ್ರೆಸ್ ಸರ್ಕಾರವು ಧನಿಕರಿಗೆ ಕಡಿಮೆ ತೆರಿಗೆ ಬಡವನಿಗೆ ಹೆಚ್ಚು ತೆರಿಗೆ ಎಂಬ ವಿಧಾನವನ್ನು ಅವಲಂಬಿಸುತ್ತಿರುವಿಕೆಯು ಸ್ಪಷ್ಟವಾಗುತ್ತದೆ

ಈ ಪದ್ಧತಿಗೂ ಇವರ ಗುರುಗಳಾದ ಶ್ರೀ ಗಾಂಧಿಯವರು " ದರಿದ್ರ ನಾರಾಯಣ " ಅಂದರೆ ಬಡವರಿಗೆ ಉಪಕಾರ ಮಾಡುವ ಪದ್ಧತಿಗೂ ಎಷ್ಟು ಅಂತರವಿರುವದೋ ಪ್ರತ್ಯೇಕವಾಗಿ ಹೇಳಬೇಕಾಗಿರುವುದಿಲ್ಲ [ಶ್ರಿ]

——

× 49 ಸಹಸ್ರ ಟನ್ ಧಾನ್ಯ ಈ ತಿಂಗಳು ಬಿಹಾರಿಗೆ ಹೋಗುವದು

ನೂತನ ಕಾಗದ ನಿಯಂತ್ರಣ ಆಜ್ಞೆ ಪ್ರಕಟಣೆ

ಭಾರತ ಸರ್ಕಾರ ಪುನರ್ನಿರ್ಮಿಸಿದ ನ್ಯೂಸ್ ಪ್ರಿಂಟ್ ನಿಯಂತ್ರಣ ಆಜ್ಞೆಯನ್ನು ಮೊನ್ನೆ ಪ್ರಕಟಿಸಿತು. ಈ ಆಜ್ಞೆ ಇದೇ ತಿಂಗಳು 12 ತಾ|| ನಿಂದ ಜಾರಿಗೆ ಬರಲಿದೆ. ಇತರ ಕೆಲಸಗಳಿಗೆ ನ್ಯೂಸ್‌ಪ್ರಿಂಟ್ ಉಪಯೋಗಿಸಲಾಗದೆಂದು ದೆಹಲಿ ವಾರ್ತೆ:

ನಡೆದು ಹೋಗುವ ವಿನೋಬ :

ಮೊನ್ನೆಯಿಂದ ಹೈದರಾಬಾದ್ ನಗರಕ್ಕೆ 6 ಮೈಲು ದೂರದಲ್ಲಿರುವ ಶಿವರಾಂಪಲ್ಲಿ ಎಂಬಲ್ಲಿ ಅಖಿಲ ಭಾರತ ಸರ್ವೋದಯ ಸಂಮೇಳನ ಪ್ರಾರಂಭವಾಗಿದೆ ಅದಕ್ಕಾಗಿ ಆಚಾರ್ಯ ವಿನೋಬ ಭಾವೆ ಕಾಲ್ನಡಿಗೆಯಲ್ಲಿ ನಾರ್ಥಾದಿಂದ ಅಲ್ಲಿಗೆ ಕಾಲು ನಡಿಗೆಯಲ್ಲಿ ತೆರಳಿರುವರು

ದಿವ್ಯವಾಣಿ

ಧನದ ರಾಶಿಯಂ ವ್ಯಯ ಮಾಡಿದಂತೆ ಲಯವಾಗುವುದು. ಧಾನ್ಯದ ರಾಶಿಯಂ ಬಳಸಿದಂತೆ ಬಯಲಾಗುವುದು. ಜ್ಞಾನದರಾಶಿಯಂ ವೆಚ್ಚ ಮಾಡಿದಂತೆ ಹೆಚ್ಚಾಗುವುದು ನಿಶ್ಚಯವೆಂದಾ ನಮ್ಮ ಕುಮಾರ ಗುರುವರ.

— ಅನುಭವದ ವಚನಗಳು.

ವೈದ್ಧೆ ಸದಸ್ಯರ ಎಚ್ಚರಿಕೆ

ಭಾರತದ ರಾಷ್ಟ್ರಾಧಿಪತಿ ರಾಜೇಂದ್ರ ಪ್ರಸಾದರ 80 ವರ್ಷದ ಸಹೋದರಿ ಶ್ರೀಮತಿ ಭಗವತೀ ದೇವಿಯವರು ಮೊನ್ನೆ ಬಿಹಾರ್ ಶಾಸನ ಸಭೆಯಲ್ಲಿ ಮಾತನಾಡುತ್ತಾ, ಸಾಬ್ಮದಿಂದ ಹಿಡಿದು ದೆಹಲಿ ವರೆಗೆ ಆಡಳಿತ ವರ್ಗವೆಲ್ಲ ಲಂಚದಿಂದ ಕೂಡಿದೆ ಜನರಿಗೆ ಇದರಿಂದ ತೀವ್ರ ತೊಂದರೆಯಾಗಿದೆ ಸರ್ಕಾರ ನಿವಾರಿಸದಿದ್ದರೆ ಅದಕ್ಕೆ ಕಷ್ಟ ಬರುವುದೆಂದರು

× ದಕ್ಷಿಣ ಆಫ್ರಿಕ ಸಧ್ಯದಲ್ಲೇ ರಿಪಬ್ಲಿಕ್ ಆಗುವುದು.

× ಕಾಶ್ಮೀರದಲ್ಲಿ ಆಕ್ರಮಣ ನಡೆದಿಲ್ಲವೆಂದು ಅಮೇರಿಕದ ಶ್ರೀ|| ಸೆಕ್ರಟರಿ ದೆಹಲಿಯಲ್ಲಿ ತಿಳಿಸಿದ್ದಾರೆ.

× ಸಯಾಂರಾಜ್ಯದಲ್ಲಿ ಬುಡಮೇಲು ಚಳುವಳಿ ಪತ್ತೆಯಾಗಿದೆ.

ಪಾಕಿಸ್ತಾನದಲ್ಲಿ ಬಂಧನಗಳು

ಪಾಕಿಸ್ತಾನದ ಚೀಫ್ ಆಫ್ ಜನ್ ಸ್ಟಾಫ್ ಮೇ|| ಜ|| ಅಕ್ಬರ್‌ಖಾನ್, ಅವರ ಪತ್ನಿ ಮತ್ತು ಪಾಕಿಸ್ತಾನ ಟೈಂಸ್ ಪತ್ರಿಕಾ ಸಂಸಾಪಕ ಫೈಜ್ ಅಹಮದ್ ರನ್ನು ಪಾಪಸ್ತಾನದಲ್ಲಿ ಬುಡಮೇಲು ಚಳವಳಿ ಮಾಡಲು ತೊಡಗಿದ್ದರೆಂದು ಒಂಧಿಸಲಾಗಿದೆ ಎಂದು ಲಾಹೋರು ವರದಿ

ಸರ್ಕಾರಿ ಆಜ್ಞೆ

ಮೈಸೂರು ಸರ್ಕಾರ ಹೊರಡಿಸಿರುವ ಆಜ್ಞೆಯಲ್ಲಿ ಅಕ್ಕಿಯಲ್ಲಿ ಇಡ್ಲಿ, ದೋಸೆ ತಯಾರಿಸುವುದನ್ನು ನಿಶೇಧಿಸಿದೆ

ಕ್ರಾಂತಿಕಾರರ ಬಂಧನ

ಅಸ್ಸಾಂನ 2 ಜಿಲ್ಲೆಗಳಲ್ಲಿ ಈ ವರ್ಷ 1 ಕಾಲು ಸಾವಿರ ಕ್ರಾಂತಿಕಾರಿ ಕಮ್ಯೂನಿಸ್ಟರ ಬಂಧನವಾಗಿದೆ ಎಂದು ಷಿಲಾಂಗಿನ ವಾರ್ತೆ.

ಜನತಾ ಆಡಳಿತ ಈಗಲೇ ಹೈದರಾಬಾದಿಗೆ ದೊರೆಯುವುದಿಲ್ಲ

ಹೈದರಾಬಾದಿಗೆ ಪ್ರಜಾ ರಾಜ್ಯ ಕೊಡುವದು ಈಗಲೇ ಸಾಧ್ಯವಿಲ್ಲ. ಆದರೆ ಆ ಬಗ್ಗೆ ಪರಿಶೀಲನೆ ಮಾಡುತ್ತೇವೆ — ಎಂದು ಕೇಂದ್ರ ಆಡಳಿತ ವರ್ಗ ಹೈದರಾಬಾದ್ ಕಾಂಗ್ರೆಸ್ ರಾಷ್ಟ್ರಪತಿ ಬಿಂದುರವರಿಗೆ ಭಾವನೆ ಕೊಟ್ಟಿತ್ತೆಂದೆ

ಶಾಂತಿ ಮತ್ತು ಕ್ರಾಂತಿ

ಈಚೆಗೆ ನಾಲ್ಕೈದೆಗಳಲ್ಲಿಯೂ ಕ್ರಾಂತಿಯೇ ದೃಷ್ಟಿಗೋಚರವಾಗುತ್ತಿದೆ; ಶಾಂತಿಯು ಎಲ್ಲೆಲ್ಲಿಯೂ ಕಾಣಬರುತ್ತಿಲ್ಲ ಏಕೆ? ಕ್ರಾಂತಿಯು ಸಂಬಂಧವು ಭೋಗದೊಂದಿಗಿದೆ, ಶಾಂತಿಯು ಸಂಬಂಧವು ಯೋಗದೊಂದಿಗಿದೆ ಪದಾರ್ಥ ವಿಜ್ಞಾನ, ಪಾಪಂಚಿಕ ಜ್ಞಾನ ಅಥವಾ ಭೋಗದ ವಿಜ್ಞಾನವು ಕ್ರಾಂತಿಯನ್ನು ಹೆಚ್ಚಿಸುವುದಾಗಿದೆ: ಆತ್ಮಜ್ಞಾನವು ಶಾಂತಿಯನ್ನು ಪ್ರತಿಪಾದಿಸುವುದಾಗಿದೆ. ಮತ, ಮತಸಂಬಂಧೀಯು ಮ ಖಂಡಲು, ಮತ ಸಂಬಂಧೀಯು ಗ್ರಂಥಗಳೂ, ರಾಜನೀತಿಕ ಸಭೆಗಳೂ ಕ್ರಾಂತಿಗೆ ಜನ್ಮವನ್ನು ಕೊಡುವುಗಳಾಗಿವೆ; ಶಾಂತಿ ಮತ್ತು ಮುಕ್ತಿಗಳನ್ನು ಕೊಡುವುಗಳಲ್ಲ ಶಾಂತಿಯನ್ನು ನಾಶಗೊಳಿಸಿ, ಯುದ್ಧಾಗ್ನಿಯನ್ನು ಬೆಳಿಗಿಸುವಂಥಾ ರಾಜನೀತಿಯು ನಮಗೆ ಸುಖ, ಶಾಂತಿ, ಮುಕ್ತಿ ಸ್ವತಂತ್ರತೆಯನ್ನು ಕೊಡಲಾರವು. ಆದರೆ ಈಚೆಗೆ ಈ ಯುಗದಲ್ಲಿ ಶಾಂತಿ ಮತ್ತು ಮುಕ್ತಿಗಳಿಗಾಗಿ ರಾಜನೀತಿಯ ಮುಖಂಡರೂ ಮತ್ತು ಮತ ಸಂಬಂಧೀಯ ಮುಖಂಡರೂ, ಇವರ ಕಡೆ ಜನರೂ ಅಸಕ್ತಿಪೂರ್ವಕವಾದ ದೃಷ್ಟಿಯನ್ನಿಟ್ಟಿರುವರು. ಆದರೆ ಇವರಿಂದ ಕ್ರಾಂತಿಯ ವಿನಹಾ ಯುದ್ಧದ ಶಾಂತಿಯಾಗಲಿ ಮುಕ್ತಿಯಾಗಲಿ ಲಭಿಸಿರುವುದಿಲ್ಲ; ಪ್ರಪಂಚದಲ್ಲಿಯ ಎಲ್ಲಾ ಕಷ್ಟ, ಬಿಲೆಗಳ ಹೆಚ್ಚಿಗೆ, ದರಿದ್ರತೆ, ಪ್ರತಿಬಂಧಗಳು, ಪರತಂತ್ರತೆ, ಯುದ್ಧ, ಇವೆಲ್ಲವೂ ರಾಜನೀತಿ ಮತ ಮತಗಳ ಪ್ರಭಾವಗಳಾಗಿವೆ ....

— ಜ್ಞಾನಶಕ್ತಿ



"ಗೋರಕ್ಷಣ"

ಪ್ರತಿ ತಿಂಗಳ ತಾ|| 1 ರಲ್ಲಿ ಪ್ರಕಟವಾಗುವ 'ಗೋರಕ್ಷಣ' ದಲ್ಲಿ ಗೋರಕ್ಷಣೆ, ಪಾಣಿದಯೆ, ಸಸ್ಯಾಹಾರ, ಪಶುವೈದ್ಯ, ಇವುಗಳನ್ನು ಕುರಿತಾದ ಲೇಖನಗಳು ಪ್ರಕಟಿಸಲ್ಪಡುವವು

ಪತ್ರಿಕೆಗೆ ಪೋಷಕರಾಗಿಯೂ, ಚಂದಾದಾರರಾಗಿಯೂ, ಲೇಖಕರಾಗಿಯೂ ಪ್ರಚಾರಕರಾಗಿಯೂ ಸಹಕಾರ ನೀಡುವ ಮಹನೀಯರಿಗೆ ವಂದನೆಗಳು.

ಅನುಕೂಲವಾದಂತೆಲ್ಲಾ ಪುಟ ಸಂಖ್ಯೆ ಹೆಚ್ಚಿಸಲಾಗುತ್ತೆ.

ವಿಳಾಸ: 'ಗೋರಕ್ಷಣ' ಸತ್ಯವಾದಿ ಆಫೀಸ್, ಮೈಸೂರು

ಶಕ್ತಿಸುಧಾ
— ಉತ್ತಮವಾದ ಟಾನಿಕ್ —

For Quality Printing
L. N. Press
Sivarampet, Mysore

Announcement

Theatre building old materials and furniture are being sold very cheap.

Apply to—
NEW OPERA TALKIES
MYSORE

ಏನೆನೂ ಕಟ್ಟಡದ ಹಳೇ ಸಾಮಾನುಗಳೂ ಫರ್ನೀಚರುಗಳೂ ಸುಲಭ ಬೆಲೆಗೆ ಮಾರಾಟಕ್ಕಿವೆ.

ವಿವರಗಳಿಗೆ—
ನ್ಯೂ ಅಪೇರಾ ಟಾಕೀಸ್
ಮೈಸೂರು

ಉಡ್‌ಲಾಂಡ್ಸ್ ಅಮೋಘ 2 ನೇ ವಾರ
ಹರಹರಮಹಾದೇವ
ಅಮೋಘ ಹಿಂದಿ ಪೌರಾಣಿಕ ಚಿತ್ರ — ಪ್ರತಿದಿನ 3 ಪ್ರದರ್ಶನಗಳು
ಬೆಳಗಿನ ಪ್ರದರ್ಶನ — 9—3—51 ರಿಂದ 3 ದಿವಸಗಳು
ಮಾಫಿ ಕಿ ಜಾಯಿಗೆ [ಹಿಂದಿ]

ರಣಜಿತ್ 6—3—51 ರಿಂದ
ನರ್ಗಿಸ್, ದಿಲೀಪ್ ಕುಮಾರ್, ಮನ್ವರ್ ಸುಲ್ತಾನ ಪಾತ್ರವಹಿಸಿರುವ
BABUL ಬಾಬುಲ್
ಅಮೋಘ ಹಿಂದಿ ಚಿತ್ರ — — ಪ್ರತಿದಿನ 3 ಪ್ರದರ್ಶನಗಳು
— ಬೆಳಗಿನ ಪ್ರದರ್ಶನ — 9—3—51 ರಿಂದ — 3 ದಿನಗಳು
ಆಗ್ ಸುಂದರ ಹಿಂದಿ ಚಿತ್ರ



ಅಮೇರಿಕಾದ ವಾಷಿಂಗ್ಟನ್ ನಗರದಲ್ಲಿ ಕಟ್ಟಲಾಗುತ್ತಿರುವ ಮೊಸ್ಲೆಂ ಮಸೀದಿ

Edited, Printed and Published by M. S. Krishna Rao. at the Satyavadi Press Chamrajpuram Mysore